**ಸಾಕ್ಷಿಗೆ ದಿನಾಂಕ 24.03.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದಃ**

**1.** ನಾನು ಈ ಪ್ರಕರಣದಲ್ಲಿ, ಮೆಡಿಕಲ್ ರೆಕಾರ್ಡ್ ಅಫಿಸರ್ ಆಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

**2.** ನಾನು ಈ ಪ್ರಕರಣದಲ್ಲಿ ತೆಗೆದುಕೊಂಡಿರುವ ನಿಲುವಿಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿಹಾಜರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 25 | ಅಧಿಕಾರ ಪತ್ರ |
| ನಿ.ಪಿ 26 | ಎಂ ಎಲ್ ಸಿ ಎಕ್ಸ್ಟ್ರಾ ಕ್ಟ್ ದೃಢೀಕೃತ ದಾಖಲೆ |
| ನಿ.ಪಿ 27 | ಪೊಲೀಸ್ ಇಂಟಿಮೇಶನ್ ದೃಢೀಕೃತ ದಾಖಲೆ |
| ನಿ.ಪಿ 28 ಮತ್ತು 29 | 2 ಕೇಸ್ ಶೀಟುಗಳು |
| ನಿ.ಪಿ 30 | ಹೊರರೋಗಿ ದಾಖಲೆ |

3. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಪ್ರಕರಣದಲ್ಲಿ ಕೋರಿರುವ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2ನೇ ಎದುರುದಾರರ ಪರ ವಕೀಲರಿಂದಃ**

4. ನಾನು ಈ ದಿನ ಹಾಜರು ಮಾಡಿರುವ ದಾಖಲಾತಿಗಳಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿಸಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ.

**1ನೇ ಎದುರುದಾರರು ಗೈರು ಹಾಜರು. ಯಾರು ಪ್ರತಿನಿಧಿಸಿರುವುದಿಲ್ಲ. ಈ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**<u>ಮರು ವಿಚಾರಣೆ: ಇಲ್ಲ.</u>**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ
ನ್ಯಾಯಾಧೀಶರು, ಬೆಂಗಳೂರು.**